ಕರ್ನಾಟಕ ಸರ್ಕಾರ

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ

ಸಂಖ್ಯೆ: ಕಾಕನಿ/ಸಿ.ಆರ್-05/ವಂತಿಗೆ/ಪ.ಪ್ರ./2020-21

ಕಲ್ಯಾಣ ಆಯುಕ್ತರವರ ಕಛೇರಿ
"ಕಾರ್ಮಿಕ ಕಲ್ಯಾಣ ಭವನ" ನಂ 48,
2ನೇ ಮಹಡಿ, ಮತ್ತೀಕೆರೆ ಮುಖ್ಯ ರಸ್ತೆ,
(ಆರ್.ಟಿ.ಓ. ಕಛೇರಿ ಹತ್ತಿರ)
ಯಶವಂತಪುರ ಬೆಂಗಳೂರು-22.
Phone: 080-23570266.
ದಿನಾಂಕ: 15-01-2021

# ಪತ್ರಿಕಾ ಪ್ರಕಟಣೆ

1) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಖಾನೆಗಳು, ಪ್ಲಾಂಟೇಷನ್‌ಗಳು, ಮೋಟಾರು ವಾಹನ ಸಂಸ್ಥೆಗಳು ಹಾಗೂ 50 ಮತ್ತು ಅದಕ್ಕಿಂತ ಹೆಚ್ಚಿನ ಕಾರ್ಮಿಕರನ್ನು ಹೊಂದಿರುವ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು/ITBT ಸಂಸ್ಥೆಗಳು, ಚಾರಿಟಬಲ್ ಶಿಕ್ಷಣ ಸಂಸ್ಥೆಗಳು,ಕರ್ನಾಟಕ ಸೊಸೈಟಿ ಕಾಯ್ದೆ 1960 ರಡಿಯಲ್ಲಿ ನೊಂದಣಿಯಾಗಿರುವ ಸಂಘಗಳು ಕಾರ್ಮಿಕರಿಂದರೂ 20 ಗಳನ್ನು ಅವರ ಡಿಸೆಂಬರ್ ತಿಂಗಳ ವೇತನದಲ್ಲಿ ಕಡಿತಗೊಳಿಸಿ ಮಾಲೀಕರು ರೂ. 40 ಗಳನ್ನು ಸೇರಿಸಿ ಒಟ್ಟುರೂ 60 ಗಳಂತೆ ಪ್ರತಿ ಕಾರ್ಮಿಕನಿಗೆ ಪ್ರತಿವರ್ಷ ಜನವರಿ 15 ರೊಳಗೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

2) ಪ್ರಸ್ತುತ ಕಾರ್ಮಿಕ ಕಲ್ಯಾಣ ಮಂಡಳಿಯು 2020ನೇ ಕ್ಯಾಲೆಂಡರ್ ವರ್ಷಕ್ಕೆ ಕಾರ್ಮಿಕ ಕಲ್ಯಾಣ ನಿಧಿಗೆ ವಂತಿಕೆ ಪಾವತಿಸುವುದಕ್ಕೆ ಸಂಬಂಧಿಸಿದಂತೆ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಿದ್ದು online ಮೂಲಕ ವಂತಿಕೆ ಪಾವತಿಸಲು ಅವಕಾಶ ಕಲ್ಪಿಸಿರುತ್ತದೆ. ಕೆಲವೊಂದು ತಾಂತ್ರಿಕ ಕಾರಣಗಳಿಂದ ನಿಗಧಿತ ಅವಧಿಯೊಳಗೆ ವಂತಿಕೆ ಪಾವತಿಸಲು ಸಾಧ್ಯವಾಗುತ್ತಿಲ್ಲವೆಂದು ಕಾರ್ಖಾನೆಗಳು/ಕಾರ್ಯಸಂಸ್ಥೆಗಳ ಮಾಲೀಕರು/ಆಡಳಿತ ವರ್ಗದವರು ವಂತಿಕೆ ಪಾವತಿಸುವ ದಿನಾಂಕವನ್ನು 31/1/2021 ರವರೆಗೆ ವಿಸ್ತರಿಸಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ online ಮೂಲಕ ವಂತಿಕೆ ಪಾವತಿಸುವ ಅವಧಿಯನ್ನು ದಿನಾಂಕ 31/1/2021 ರವರೆಗೆ ವಿಸ್ತರಿಸಲಾಗಿದೆ.

3) ಈ ಕಾಯ್ದೆಯಡಿಯಲ್ಲಿ online ಮುಖಾಂತರ ವಂತಿಗೆ ಪಾವತಿಸಬೇಕಾದ ವೆಬ್‌ಸೈಟ್ ವಿಳಾಸ **www.klwb.karnataka.gov.in**

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **8277291175, 8277120505, 080-23475188** ಮೂಲಕ ಸಂಪರ್ಕಿಸಬಹುದು.

-ಸಹಿ-

ಎಂ.ಎಸ್. ಚಿದಾನಂದ
ಕಲ್ಯಾಣ ಆಯುಕ್ತರು
ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ
ಯಶವಂತಪುರ, ಬೆಂಗಳೂರು.